ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್‌ನಾಮಾ.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1896ನೇ ಇಸವಿ ಜುಲ್ಯೆ 7ನೇ ತಾರೀಖು ಲಾಗಾಯತು 1898ನೇ ಇಸವಿ ಜುಲ್ಯೆ 6ರ ವರೆಗೆ ಯರಡು ವರುಷಗಳ ಮಟ್ಟಿಗೆ ಸಿಟಿ ಮಜಕೂರಿನಲ್ಲಿ ಮ್ಯುನಿಸಿಪಲ್ ಲಾಂದ್ರಗಳಿಗೆ ದೀಪ ಹತ್ತಿ ಸತಕ್ಕ ಬ್ಯೈ ಮೊಹರ್‌ಮಾಡಿದ ದರಖಾಸ್ತುಗಳನ್ನ ಇಪ್ಪವಿದ್ದವರು ಈ ಕೆಳಗೆ ಸ್ಯೆ ಮಾಡಿರುವವರಿಗೆ, 1896ನೇ ಜೂ॥ 15ನೇ ತಾರೀಖು ಸೋಮವಾರದೊಳಗಾಗಿ ಕೊಡಬಹುದು.

ದರಖಾಸ್ತು ಲಕೋಟೆಗಳ ಮೇಲ್‌ಭಾಗದಲ್ಲಿ "ಬೆಂಗಳೂರು ಸಿಟಿಯಲ್ಲಿ ದೀಪ ಹತ್ತಿಸತಕ್ಕ ಬ್ಯೈ ಟೆಂಡರ್" ಯಂದು ಬರದು ಸಿಟಿ ಮ್ಯುನಿಸಿಪಾಲಿಟಿ ಪ್ರಸಿಡೆಂಟರವರಿಗೆ ಅಡ್ರೆಸ್ ಮಾಡಲ್ಪಡತಕ್ಕದ್ದು. ಮತ್ತು ದರಖಾಸ್ತುಗಳ ಸಂಗಡ ನಗದಾಗಲಿ, ಯಾ ಕರೆನ್ಸಿ ನೋಟುಗಳಿ 250 ರೂಪಾಯಿ ಹಾಜರ್ಪಡತಕ್ಕದ್ದು. (ಟೆಂಡರ್ ಮಂಜೂರಾಗದೆ ಇರುವ ಪಕ್ಷಕ್ಕೆ ಈ ಮೊಬಲಗು ವಾಪಸ್ ಮಾಡಲ್ಪಡುತ್ತೆ. ಮತ್ತು ದರಖಾಸ್ತುಗಳಲ್ಲಿ ಮಾಡಿದೂನಾ ಪ್ರತಿ ವೊಂದು ಲ್ಯಾಂಪಿಗೂ ತಗಲುವ ರೇಟನ್ನ ನಮೂದಿಸತಕ್ಕದ್ದು.

ಈಗ ಸುಮಾರು 850 ಲಾಂಪ್ರಗಳು ಇರುತ್ತವೆ ಇವು ಮುಂದೆ 1,000 ಲಾಂಪ್ರಗಳ ವರಗೂ ಜಾಸ್ತೀ ಆಗಬಹುದು. ಪ್ರತಿ ದಿನದಲ್ಲಿಯೂ ಸಾಯಂಕಾಲ 6 ಘಂಟೆ ಲಾಗಾಯತು ಬೆಳಗಿನಝಾಮದ 4 ಘಂಟೆ ವರಗೂ ದೀಪಗಳು ಪೂರಯುತ್ತಿರತಕ್ಕದ್ದು, ಎತ್ತಿ ಆಗಲಾ 1 ಇಂಚ್ ಇರತಕ್ಕದ್ದು, ಮತ್ತು ಕೆರೋಸ್ ಆಯಿಲ್ ಯಂಗೆ 125 ಡಿಗ್ರಿಗಳ ಪ್ರಕಾಶ ಪುಳ್ಳದ್ದನ್ನ ಉಪಯೋಗಿಸತಕ್ಕದ್ದು. 18 ವೋಲ್ಟುತ್ತಿ ಬೆಳಕಿಗೆ ಸಮಘಾದ ಬೆಳಕು ಕೊಡತಕ್ಕ ಬರ್ನರ್ ಯಿಡತಕ್ಕದ್ದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಕಡಿಮೇ ಷರತ್ತುಗಳನ್ನ ಮ್ಯುನಿಸಿಪಲ್ ಆಫೀಸಿನಲ್ಲಿ ಬರಹ ಮೂಲಕವಾಗಿಯಾಗಲಿ, ರೂಬರೂ ಹಾಜರಾಗಿಯಾಗಲಿ ತಿಳದುಕೊಳ್ಳಬಹುದು.

ತಾರೀಖು 8ನೇ ಜೂ॥ 1896.

ಮ್ಯುನಿಸಿಪಲ್ ಕಮ್ಮಿಷನರಾಗಲಿಕ್ಕೆ ಆರಹರಂತ 1896ನೇ ಇಸವಿ ಮೇ 28 ಮತ್ತು ಜೂ॥ 4ನೇ ಮತ್ತು ಮಿನ ಗೆಜೆಟ್ಟಿನಲ್ಲಿ ಘೋಷಿಸ ಮಾಡಿರುವ ಜನಗಳ ವೈಸಿ ಯಾರ್ಯಾರಿಗೆ ಈ ಕೆಲಸಕ್ಕೆ ಕೀರಲೂ ಯಿಷ್ಟವಿರುತ್ತೋ ಅಂಥಾವರು 1891ನೇ ಇಸವಿ ಮಿಸೆಂ ಬರ್ 3ನೇ ಮತ್ತು ಮಿನ ಯೆಲೆಕ್ಷನ್ ರೂಲ್ಸ್ 11ನೇ ಪ್ಯಾರಾ ಅನುಸರಿಸಿ, 1896ನೇ ಇಸವಿ ಜೂ॥ 22ನೇ ತಾರೀಖಿನ ಮೊಳಗಾಗಿ ಪ್ರಸಿಡೆಂಟರಿಗೆ ಬರದುಕೊಳ್ಳಬೇಕೆಂತ ಅಪೇಕ್ಷಿಸೋಣಾಗಿ ಇದೆ.

ಟಿ. ಪಿ. ಲೆವಾರ್ಡ್,
ಪ್ರಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ಇ ಸ್ತಿ ಹಾ ರ್ ನಾ ಮೆ.

ತಾರೀಖು 21ನೇ ಮೇ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾವ ನರಸಿಂಗರಾಯನಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರಫೀಟಾವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮೂಲೂರು ತಾಲ್ಲೂಕು ಆವುಲ್‌ದಾರ್ರ ಕಚೇರೀಲಿ 1896ನೇ ಜೂ॥ 29ನೇ ತಾರೀಖಿನಲ್ಲಿ ಒಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಪೀಲ್ ವೇರಿಗೆ 135—2—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಿಗಿನ ಕೇಕಡಾ 25 ರೂಪಾಯಿಯಮನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲೂ ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುದಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.